**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ, ಹುಬ್ಬಳ್ಳಿ.**

**OS**: 49-24 **PW**-1

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 20.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ A V B, ವಕೀಲರಿಂದ ಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ. ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರಪಡಿಸಿದ್ದೇನೆ.

ದಿಃ 19.06.2017 ರಂದು ಆದ ಆನ್ ಲೈನ್ ಖರೀದಿ ಪತ್ರವನ್ನು ನಿಪಿ.1 ಎಂದು ಗುರುತಿಸಲಾಯಿತು.

ಪಾಳೆ ಗ್ರಾಮದ ಸ ನಂಃ 59/2 ನೇದ್ದರ ಪಹಣಿ ಪತ್ರಿಕೆಯನ್ನು ನಿಪಿ.2 ಎಂದು ಗುರುತಿಸಲಾಯಿತು.

ದಿಃ 18.09.2019 ರಂದು ಆನ್ ಲೈನ್ ಖರೀದಿ ಪತ್ರವನ್ನು ನಿಪಿ.3 ಎಂದು ಗುರುತಿಸಲಾಯಿತು.

ಪಾಳೆ ಗ್ರಾಮದ ಸ ನಂಃ 59/1 ಪಹಣಿ ಪತ್ರಿಕೆಯನ್ನು ನಿಪಿ.4 ಎಂದು ಗುರುತಿಸಲಾಯಿತು.

ದಿಃ 01.10.2019 ರಂದು ಆದ ಆನ್ ಲೈನ್ ಖರೀದಿ ಪತ್ರವನ್ನು ನಿಪಿ.5 ಎಂದು ಗುರುತಿಸಲಾಯಿತು.

ರಡ್ಡಿಹಾಳ ಗ್ರಾಮದ ಸ ನಂಃ 45/5 ನೇದ್ದರ ಪಹಣಿ ಪತ್ರಿಕೆಯನ್ನು ನಿಪಿ.6 ಎಂದು ಗುರುತಿಸಲಾಯಿತು.

ದಿಃ 18.7.2019 ರ ಆನ್ ಲೈನ್ ಖರೀದಿ ಪತ್ರವನ್ನು ನಿಪಿ.7 ಎಂದು ಗುರುತಿಸಲಾಯಿತು.

ಪ್ರಾಪರ್ಟಿ ರಜಿಸ್ಟರಿನ ಕಾರ್ಡಿನ ನಕಲನ್ನು ನಿಪಿ.8 ಎಂದು ಗುರುತಿಸಲಾಯಿತು.

ದಿಃ 18.7.2019 ರಂದು ಆನ್ ಲೈನ್ ಖರೀದಿ ಪತ್ರವನ್ನು ನಿಪಿ.9 ಎಂದು ಗುರುತಿಸಲಾಯಿತು.

ಪ್ರಾಪರ್ಟಿ ರಜಿಸ್ಟರಿನ ಕಾರ್ಡಿನ ನಕಲನ್ನು ನಿಪಿ.10 ಎಂದು ಗುರುತಿಸಲಾಯಿತು.

**OS**: 49-24 **PW**-1

ಬ್ಯಾಂಕ ಸ್ಟೇಟಮೆಂಟನ್ನು ನಿಪಿ.11 ಎಂದು ಗುರುತಿಸಲಾಯಿತು. (ಪ್ರತಿವಾದಿ ಪರ ಶ್ರೀ ಪಿ ಕೆ ಜೆ, ವಕೀಲರ ತಕರಾರಿನ ಮೇರೆಗೆ ಗುರುತಿಸಲಾಯಿತು.)

Certificate 65 -B Evidence Act., ನಿಪಿ.12 ಎಂದು ಗುರುತಿಸಲಾಯಿತು.

ಶ್ರೀಧರ ಭರಮಪ್ಪ ಕುತ್ತೆ ಇವರ ಮರಣ ಪ್ರಮಾಣ ಪತ್ರವನ್ನು ನಿಪಿ.13 ಎಂದು ಗುರುತಿಸಲಾಯಿತು.

ಶ್ರೀಮತಿ ವಿಮಲಾ ಶ್ರೀಧರ ಕುತ್ತೆ ಇವರ ಮರಣ ಪ್ರಮಾಣ ಪತ್ರವನ್ನು ನಿಪಿ.14 ಎಂದು ಗುರುತಿಸಲಾಯಿತು.

ಶ್ರೀಕಾಂತ ಭ. ಕುತ್ತೆ ಇವರ ಮರಣ ಪ್ರಮಾಣ ಪತ್ರವನ್ನು ನಿಪಿ.15 ಎಂದು ಗುರುತಿಸಲಾಯಿತು.

ಶಶಿಕಲಾ ಕುತ್ತೆ ಇವರ ಮರಣ ಪ್ರಮಾಣ ಪತ್ರವನ್ನು ನಿಪಿ.16 ಎಂದು ಗುರುತಿಸಲಾಯಿತು.

ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರವನ್ನು ನಿಪಿ.17 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದರು,**

**ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ.

**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ, ಹುಬ್ಬಳ್ಳಿ**

**MVC** 593-23 **PW**-1

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 20.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ K T H, ವಕೀಲರಿಂದ ಃ**

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರಪಡಿಸಿದ್ದೇನೆ.

ಅಪಘಾತದ ಬಗ್ಗೆ ಪೋಲಿಸರಿಗೆ ಕೊಟ್ಟ ದೂರಿನ ದೃಢೀಕೃತ ನಕಲನ್ನು ನಿಪಿ.1 ಎಂದು, ಪ್ರಥಮ ವರ್ತಮಾನ ವರದಿಯನ್ನು ನಿಪಿ.2 ಎಂದು, Inquest ನಿಪಿ.3 ಎಂದು, ಅಪರಾಧ ಸ್ಥಳದ ಪಂಚನಾಮೆಯನ್ನು ನಿಪಿ.4 ಎಂದು, ವಾಹನ ತಡೆ ಹಿಡಿದ ಪಂಚನಾಮೆಯನ್ನು ನಿಪಿ.5 ಎಂದು, ಮರಣೋತ್ತರ ವರದಿಯನ್ನು ನಿಪಿ.6 ಎಂದು, ಎಂ ವಿ ಐ ವರದಿಯನ್ನು ನಿಪಿ.7 ಎಂದು, ಅಂತಿಮ ವರದಿಯನ್ನು ನಿಪಿ.8 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಎದುರುದಾರರ ಪರ ವಕೀಲರು ಸಮಯ ಕೋರಿದರು,**

**ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ

**ECA** 6-21 **RW**-2

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 20.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರ ಪರ ಶ್ರೀ M Y A, ವಕೀಲರಿಂದ ಃ**

ಮರಣ ಹೊಂದಿದ ವ್ಯಕ್ತಿ ವಾಹನ ಚಲಾವಣೆ ಮಾಡುವಾಗ ಮರಣ ಹೊಂದಿರುತ್ತಾನೆ ಅಂದರೆ ಸರಿ. ನಮ್ಮ ಬಳಿ ಸದರಿ ವ್ಯಕ್ತಿ ಚಾಲಕನೆಂದು ಕೆಲಸ ಮಾಡುತ್ತಿದ್ದನು ಅಂದರೆ ಸರಿ. ನಾನು ತಿಂಗಳಿಗೆ 20 ಸಾವಿರ ರೂ. ಸಂಬಳ ಕೊಡುತ್ತಿದ್ದೆ ಅಂದರೆ ಸರಿಯಲ್ಲ, 15 ಸಾವಿರ ರೂ. ಕೊಡುತ್ತಿದ್ದೆ. ಪರಿಹಾರ ಕೊಡಲು ನಾನು ಮತ್ತು ವಿಮಾ ಕಂಪನಿಯವರು ಬಾದ್ಯಸ್ಥರು ಅಂದರೆ ಸರಿ.

**ಪಾಟೀ ಸವಾಲುಃ ಶ್ರೀ ಪಿ ಎಂ ಸಿ ಎದುರುದಾರ -2 ರ ಪರ ವಕೀಲರಿಂದಃ**

ಈ ಪ್ರಕರಣವನ್ನು ನಮ್ಮ ಹೆಣ್ಣು ಮಕ್ಕಳು ದಾಖಲ್ ಮಾಡಿರುತ್ತಾರೆ. ಮೃತ ಬಸವರಾಜ ನನಗೆ ಮಗನಾಗಬೇಕು. ಅರ್ಜಿದಾರಳು ನನ್ನ ಹೆಂಡತಿ ಹಾಗೂ ಮರಣ ಹೊಂದಿದ ವ್ಯಕ್ತಿ ನನ್ನ ಮಗ. ನಾನು ಹಮಾಲಿ ಕೆಲಸ ಮಾಡುತ್ತೇನೆ. ನಾನು ಕುಸುಗಲ್ ದಲ್ಲಿ ಇರುತ್ತೇನೆ. ಮೃತ ಬಸವರಾಜ ಚಾಲಕನೆಂದು ಕೆಲಸ ಮಾಡುತ್ತಿದ್ದನು. ನಮ್ಮ ಬಳಿ ಚಾಲಕನೆಂದು ಕೆಲಸ ಮಾಡುತ್ತಿದ್ದನು. ಮೊದಲು ನಾನು ಹಮಾಲಿ ಕೆಲಸ ಮಾಡುತ್ತಿದ್ದೆನು. ಈಗ ನಾನು ಹೊಲ-ಮನೆ ಕೆಲಸ ಮಾಡುತ್ತೇನೆ. ನನ್ನದು ಸಾರಿಗೆ ಕಂಪನಿ ಇಲ್ಲ. ನಾನು, ಅರ್ಜಿದಾರಳು, ನನ್ನ ಮಗ ಕೂಡಿ ಇದ್ದೆವು ಅಂದರೆ ಸರಿಯಲ್ಲ. ಅವರು ನ್ಯಾಯ ಮಾಡಿ ಬೇರೆ ಇರುತ್ತಾರೆ, ಆದರೆ ವಿಚ್ಛೇದನ ಇಲ್ಲ. ನನ್ನ ಬಳಿ ಡಿ ಎಲ್ ಇಲ್ಲ. ನನಗೆ ಇದೊಂದೆ ಗಾಡಿ ಇತ್ತು. ಸದರಿ ಗಾಡಿ ನನ್ನ ಮಗ ಚಲಾವನೆ ಮಾಡುತ್ತಿದ್ದನು. ಆತನಿಗೆ ಡಿ ಎಲ್ ಇತ್ತು. ನಾನು ತಂದೆಯಾಗಿ ಮಗನಿಗೆ ಗಾಡಿ ಕೊಡಿಸಿದ್ದೆನು ಅಂದರೆ ಸರಿಯಲ್ಲ. ನನ್ನ ಮಗ ಬೇರೆ ಕಡೆ ಕೆಲಸ ಮಾಡುವ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ಸದರಿ ಗಾಡಿಯನ್ನು ನಾನು ಮಗನಿಗೋಸ್ಕರ ತೆಗೆದುಕೊಂಡು ಆತನಿಗೆ ಕೊಟ್ಟಿದ್ದೆನು ಅಂದರೆ ಸರಿಯಲ್ಲ. ಈ ಗಾಡಿ ಬಿಟ್ಟರೆ ನನಗೆ ಬೇರೆ ಉದ್ಯೋಗ ಇರಲಿಲ್ಲ. ನನ್ನ ಮಗ ಬೇರೆ ಕಡೆ ಕೆಲಸಕ್ಕೆ ಹೋಗುತ್ತಿದ್ದನು, ನಾನು 15 ಸಾವಿರ ರೂ. ಪಗಾರ ಕೊಡುತ್ತೇನೆ ಎಂದು ಕರೆದಿದ್ದೆನು. ಬೇರೆ ಕಡೆಗೆ ಎಲ್ಲಿ ಕೆಲಸಕ್ಕೆ ಹೋಗುತ್ತಿದ್ದನು ಎಂದು ಗೊತ್ತಿಲ್ಲ. ಬೇರೆಯವರು 20 ಸಾವಿರ ರೂ. ಸಂಬಳ ಕೊಡುವ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ನಾನು 15 ಸಾವಿರ ರೂ. ಪಗಾರ ಕೊಡುವ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ನನ್ನ ಮಗ ನನ್ನ ಬಳಿ ಕೆಲಸ ಮಾಡುವ ಬಗ್ಗೆ ನಾನು ದಾಖಲೆ ಹಾಜರಪಡಿಸಿಲ್ಲ.

ನಾನು, ನನ್ನ ಹೆಂಡತಿ, ಹಾಗೂ ಮಗ ಕೂಡಿ ಇದ್ದೆನು ಅಂದರೆ ಸರಿಯಲ್ಲ. ನಾವೆಲ್ಲರೂ ಕೂಡಿರುವುದರಿಂದ ಮಗ ಕೆಲಸ ಮಾಡುವ ಬಗ್ಗೆ ಮತ್ತು 15 ಸಾವಿರ ರೂ. ಪಗಾರ ಕೊಡುವ ಬಗ್ಗೆ ದಾಖಲೆ ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. ಅರ್ಜಿದಾರಳಿಗೆ ಪರಿಹಾರ ಕೊಡಿಸಲು ಮಗ ನನ್ನ ಬಳಿ ಕೆಲಸ ಮಾಡುತ್ತಿದ್ದನು ಎಂದು ಮತ್ತು 15 ಸಾವಿರ ರೂ. ಪಗಾರ ಕೊಡುತ್ತಿದ್ದೆನು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ವಾಹನ ಚಲಾವನೆ ಮಾಡಲು ಬರುತ್ತಿರಲಿಲ್ಲ. ಮಗ ಗಾಡಿ ಹೊಡೆಯುತ್ತಿದ್ದುದರಿಂದ ಆತನಿಗೋಸ್ಕರ ಗಾಡಿ ಖರೀದಿ ಮಾಡಿದ್ದೆವು ಅಂದರೆ ಸರಿಯಲ್ಲ. ಆತನ ದುಡಿಮೆಗೋಸ್ಕರ ಗಾಡಿ ಕೊಡಿಸಿದ್ದೆವು ಅಂದರೆ ಸರಿಯಲ್ಲ.

ಅಪಘಾತವು ಕೋಲಾರ ಬಳಿ ಬೆಳಿಗ್ಗೆ ಆಗಿದೆ. ನಿಂತ ಟ್ರಕ್ಕಿಗೆ ಹೋಗಿ ಅಪಘಾತಪಡಿಸಿರುತ್ತಾನೆ. ಮಗನ ತಪ್ಪಿನಿಂದ ಅಪಘಾತವಾಗಿದೆ. ದೂರನ್ನು ನಮ್ಮ ಹೆಂಡತಿ ನೀಡಿರುತ್ತಾಳೆ. ಅಪಘಾತದ ಕಾಲಕ್ಕೆ ಗಾಡಿಯಲ್ಲಿ ಬೇರೆ ಯಾರು ಇರಲಿಲ್ಲ. ದೂರಿನಲ್ಲಿ ಮೃತರ ತಪ್ಪಿನಿಂದ ಅಪಘಾತವಾಗಿದೆ, ಕ್ರಮ ತೆಗೆದುಕೊಳ್ಳಿ ಎಂದು ಹೇಳಲಾಗಿದೆ ಅಂದರೆ ಸರಿಯಲ್ಲ. ಪೋಲಿಸರು ಮೃತ ವ್ಯಕ್ತಿ ತಪ್ಪಿನಿಂದ ಅಪಘಾತವಾಗಿದೆ ಎಂದು ಅಂತಿಮ ವರದಿ ಸಲ್ಲಿಸಿದ್ದಾರೆ ಅಂದರೆ ಗೊತ್ತಿಲ್ಲ. ನಾನು ಈ ಪ್ರಕರಣ ಬಿಟ್ಟು ಬೇರೆ ಪ್ರಕರಣ ಹಾಜರಪಡಿಸಿಲ್ಲ. ಈಗ ಸಾಕ್ಷಿಗೆ ಆತನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ತೋರಿಸಲಾಗಿ ಅದರಲ್ಲಿರುವ ಸಹಿ ತನ್ನದು ಎಂದು ಹೇಳುತ್ತಾನೆ. ಈಗ ಸಾಕ್ಷಿಗೆ ಎಂ ವಿ ಸಿ ನಂ: 279/2020 ರ ಆದೇಶದ ದೃಢೀಕೃತ ಪ್ರತಿ ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ತನ್ನದು ಎಂದು ಹೇಳುತ್ತಾರೆ. ಈಗ ಸಾಕ್ಷಿಗೆ ನಿಆರ್ - 6 ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ತನ್ನದೆಂದು ಹೇಳುತ್ತಾರೆ. ನಾನೇ ಕೋಟೆಪ್ಪ ಮತ್ತು ಕೋಟೆಪ್ಪ ಮಡಿವಾಳರ ಎಂದು ಸಹಿ ಮಾಡುತ್ತೇನೆ. ಎಂ ವಿ ಸಿ ನಂ: 279/20 ನೇದ್ದರಲ್ಲಿ ನಾವು ಪರಿಹಾರ ಪಡೆದಿರುತ್ತೇವೆ ಅಂದರೆ ಸರಿ. ಪರಿಹಾರ ಪಡೆದಿದ್ದರೂ ಸಹಿತ ನಾನು ನನ್ನ ಹೆಂಡತಿಯಿಂದ ಪರಿಹಾರದ ಅರ್ಜಿ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ನಾನು 4 ಲಕ್ಷ ಹಾಗೂ ನನ್ನ ಹೆಂಡತಿ 5 ಲಕ್ಷ ರೂ. ಪರಿಹಾರ ಪಡೆದಿದ್ದಾಳೆ ಅಂದರೆ ಸರಿ.

**ECA** 6-21 **RW**-2

ಈಗಾಗಲೇ ಪರಿಹಾರ ಪಡೆದಿದ್ದರಿಂದ ಎರಡನೇ ಎದುರುದಾರರು ಪರಿಹಾರ ಕೊಡಲು ಬಾದ್ಯಸ್ಥರು ಅಲ್ಲ ಅಂದರೆ ನಾನು ಅರ್ಜಿ ಹಾಕಿಲ್ಲವೆಂದು ಹೇಳುತ್ತಾರೆ. ಪರಿಹಾರಗೋಸ್ಕರ ಹೆಂಡತಿ ಹಾಗೂ ನಾನು ಬೇರೆ ಇರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ

**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ, ಹುಬ್ಬಳ್ಳಿ.**

**OS**: 66-24 **PW**-1

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 20.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ B K M, ವಕೀಲರಿಂದ ಃ**

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರಪಡಿಸಿದ್ದೇನೆ.

ದಿಃ 13.06.2022 ರಂದು ಆನ್ ಲೈನ್ ಖರೀದಿ ಸಂಚಗಾರ ಪತ್ರವನ್ನು ನಿಪಿ.8 ಎಂದು ಗುರುತಿಸಲಾಯಿತು.

ಸಮ್ಮತಿ ಪತ್ರದ ಆನ್ ಲೈನ್ ಪ್ರತಿಯನ್ನು ನಿಪಿ.9 ಎಂದು ಗುರುತಿಸಲಾಯಿತು.

ಒತ್ತಿ ವಿಮೋಚನಾ ಪತ್ರಗಳ ಎರಡು ಆನ್ ಲೈನ ಪ್ರತಿಗಳನ್ನು ನಿಪಿ.10 ಹಾಗೂ ನಿಪಿ.11 ಎಂದು ಗುರುತಿಸಲಾಯಿತು.

ನಮೂನೆ -15 ಯನ್ನು ನಿಪಿ.12 ಎಂದು ಗುರುತಿಸಲಾಯಿತು.

ಬ್ಯಾಂಕ್ ಸ್ಟೇಟಮೆಂಟನ್ನು ನಿಪಿ.13 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗೆ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ.

**OS**: 526-23 **PW**-1

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 20.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ S N P, ವಕೀಲರಿಂದ ಃ**

2. ನಾನು ಬಿ ಕಾಂ ವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನು ಯಾವುದೇ ದಾಖಲಾತಿಗಳನ್ನು ಸಹಿ ಮಾಡುವಾಗ ಓದಿ ತಿಳಿದುಕೊಂಡು ಸಹಿ ಮಾಡುತ್ತೇನೆ. ನಾನೇ ದಾವಾ ಹಾಕಲು ಮಾಹಿತಿ ನೀಡಿರುತ್ತೇನೆ. ನಮ್ಮ ತಂದೆ ಬಸವರಾಜ. ಅವರ ತಂದೆ ಗೋವಿಂದಪ್ಪ. ಆ ಗೋವಿಂದಪ್ಪ ರವರಿಗೆ 2 ಜನ ಹೆಂಡತಿಯರು ಅಂದರೆ ಸರಿ. ಒಂದನೇ ಹೆಂಡತಿ ರುಕ್ಮೀಣಿಗೆ 4 ಜನ ಮಕ್ಕಳು ಅಂದರೆ ಸರಿ. ಎರಡನೇ ಹೆಂಡತಿಗೆ 6 ಜನ ಮಕ್ಕಳು ಅಂದರೆ ಸರಿ. 4 ಜನ ಗಂಡು ಮಕ್ಕಳು ಹಾಗೂ 6 ಜನ ಹೆಣ್ಣು ಮಕ್ಕಳು ಅಂದರೆ ಸರಿ. ಗೋವಿಂದಪ್ಪ ಸುಮಾರು ಸರ್ಯಾರ್ಜಿತ ಆಸ್ತಿಗಳನ್ನು ಹೊಂದಿದ್ದರು ಅಂದರೆ ಸರಿ. ದೇಶಪಾಂಡೆನಗರದಲ್ಲಿ ಒಂದು ಮನೆ, ಕೇಶ್ವಾಪೂರದಲ್ಲಿ ಒಂದು ಮನೆ, ಹಿರೇಪೇಟೆಯಲ್ಲಿ ಶೇಷ ಮಹಲ್, ಮತ್ತು ದಾವಾ ಆಸ್ತಿ ನಂಃ 1 ಮತ್ತು 2 ಅಂದರೆ ಸರಿ. ಮನೆ ಮತ್ತು ಅಂಗಡಿಗಳು ನಮ್ಮ ಅಜ್ಜನ ಸ್ವಯಾರ್ಜಿತ ಆಸ್ತಿಗಳು ಅಂದರೆ ಸರಿ. ನಮ್ಮ ಅಜ್ಜನಿಂದ ನಮ್ಮ ತಂದೆಗೆ ದಾವಾ ಆಸ್ತಿಗಳು ಹೇಗೆ ಬಂದವು ಎಂದು ತೋರಿಸಲು ದಾಖಲಾತಿಗಳನ್ನು ಹಾಜರಪೇಡಿಸಿಲ್ಲ ಅಂದರೆ ಸರಿ, ಆದರೆ ನಾವು ಉತಾರೆಗಳನ್ನು ಹಾಜರಪಡಿಸಿರುತ್ತೇನೆ ಎಂದು ಹೇಳುತ್ತಾರೆ. ಉತಾರೆಗಳಲ್ಲಿ ನಮ್ಮ ಅಜ್ಜನಿಂದ ನಮ್ಮ ತಂದೆಗೆ ಬಂದ ಬಗ್ಗೆ ವಿವರ ಇಲ್ಲ ಅಂದರೆ ಸರಿಯಲ್ಲ. ಪಾಲು ಮೂಲಕ ಬಂದಿವೆ. ವಿಲ್ ಪ್ರಕಾರ ಪಾಲು ವಿಭಾಗವಾಗಿವೆ ಅಂದರೆ ಸರಿಯಲ್ಲ. ನಮ್ಮ ಅಜ್ಜ ಜೀವಂತ ಇದ್ದಾಗ ಪಾಲುವಿಭಾಗ ಆಗಿದೆ. ನಮ್ಮ ಅಜ್ಜ ಜೀವಂತವಿದ್ದಾಗ ನಮ್ಮ ತಂದೆಗೆ ದಾವಾ ಆಸ್ತಿ ನಂಃ 1 ಹಾಗೂ 2 ಕೊಟ್ಟಿದ್ದಾರೆ ಅಂದರೆ ಸರಿ. ದೇಶಪಾಂಡೆನಗರ ಹಾಗೂ ಕೇಶ್ವಾಪೂರ ಮತ್ತು ಹಿರೇಪೇಟೆಯಲ್ಲಿರುವ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇಲ್ಲ ಅಂದರೆ ನಮಗೆ ಅದರಲ್ಲಿ ಹಕ್ಕು ಇಲ್ಲವೆಂದು ಹೇಳತ್ತಾರೆ. ಈಗ ಸಾಕ್ಷಿಗೆ ದಿಃ 03.12.2011 ರಂದು ಆದ ಬಕ್ಷಿಸ ಪತ್ರದ ಜರಾಕ್ಸ ಪ್ರತಿ ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ಒಪ್ಪಿಕೊಂಡಿರುತ್ತಾರೆ. ಈಗ ಸಾಕ್ಷಿಗೆ ದಿಃ 05.05.2012 ರಂದು ಆದ ವಾಟ್ನಿ ಪತ್ರ ತೋರಿಸಲಾಗಿ ಅದರಲ್ಲಿರುವ ತನ್ನ ಸಹಿ ನೋಡಿ ಒಪ್ಪಿಕೊಂಡಿರುತ್ತಾರೆ. ಬಕ್ಷಿಸ ಪತ್ರ ಮತ್ತು ವಾಟ್ನಿ ಪತ್ರವನ್ನು ರದ್ದುಪಡಿಸಲು ಪರಿಹಾರ ಕೇಳಿಲ್ಲ. ದಾವಾ ಆಸ್ತಿ 2 ನೇದ್ದನ್ನು ನಮ್ಮ

ತಂದೆ ನಮ್ಮ ತಾಯಿಗೆ ಬಕ್ಷಿಸ ಪತ್ರ ಬರೆದುಕೊಟ್ಟಿರುತ್ತಾರೆ ಅಂದರೆ ಸರಿ. ಬಕ್ಷಿಸ ಪತ್ರ ರದ್ದುಪಡಿಸಲು ಪರಿಹಾರ ಕೇಳಿಲ್ಲ.

**OS**: 526-23 **PW**-1

ನಿಪಿ.8 ರಲ್ಲಿ ಎಲ್ಲರ ಹೆಸರು ಇದೆ ಅಂದರೆ ಸರಿ. ನಿಪಿ.8 ರಲ್ಲಿರುವವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇರಲಿಲ್ಲ ಅಂದರೆ ನಮ್ಮ ತಂದೆಯನ್ನು ಮಾತ್ರ ಮಾಡಿರುತ್ತೇವೆ ಎಂದು ಹೇಳುತ್ತಾರೆ. ನಮ್ಮ ಅಜ್ಜ ತನ್ನ ಜೀವಿತ ಕಾಲದಲ್ಲಿ ದಾವಾ ಆಸ್ತಿ 1 ಮತ್ತು 2 ನ್ನು ನಮ್ಮ ತಂದೆಗೆ ಬಿಟ್ಟುಕೊಟ್ಟಿದ್ದರಿಂದ ನಮ್ಮ ತಂದೆ ಜೀವಿತ ಕಾಲದಲ್ಲಿ ನಮಗೆ ಪಾಲು ಕೇಳಲು ಅಧಿಕಾರ ಇಲ್ಲವೆಂದರೆ ಸರಿಯಲ್ಲ. ಬಕ್ಷಿಸ ಪತ್ರ ಹಾಗೂ ಪಾಲು ವಿಭಾಗ ಪತ್ರ ವಾಗುವಾಗ ಹಿರಿಯರು ಕುಳಿತುಕೊಂಡು ಮಾತನಾಡಿದ್ದೆವು, ಪರಿಹಾರ ಸಿಗಲಿಲ್ಲ, ಆದ್ದರಿಂದ ದಾವೆ ಹಾಕಿದ್ದೇನೆ. 2012, 2014, 2016 ಹಾಗೂ 2020 ರಲ್ಲಿ ಹಿರಿಯರ ಮೂಲಕ ಮಾತುಕತೆಯಾಗಿದೆ. ನಾನು ಹಿರಿಯರ ಮೂಲಕ ಮಾತುಕತೆಯಾಗಿದೆ ಎಂದು ಈ ದಾವೆಯಲ್ಲಿ ಬರೆಸಿಲ್ಲ ಅಂದರೆ ಸರಿ. ಆ ತರಹ ಮಾತುಕತೆಯಾಗಿಲ್ಲ, ಆ ಕಾರಣ ಬರೆಸಿಲ್ಲ ಅಂದರೆ ಸರಿಯಲ್ಲ. 2020 ರ ನಂತರ ಮಾತುಕತೆಯಾಗಿಲ್ಲ. 2020 ರಲ್ಲಿ ದಾವೆ ಹಾಕಲು ತೊಂದರೆ ಇರಲಿಲ್ಲ, ಅವರು ಪಾಲುವಿಭಾಗ ಮಾಡಿಕೊಡುತ್ತೇನೆಂದು ಒಪ್ಪಿಕೊಂಡಿದ್ದರು. ಪಾಲುವಿಭಾಗ ಮತ್ತು ಬಕ್ಷಿಸ ಪತ್ರದಲ್ಲಿ ಕೇವಲ ಕರ ತುಂಬಲು ಮತ್ತು ಸರಕಾರಿ ಕೆಲಸಕ್ಕೆ ಮಾಡಿಕೊಂಡಿರುತ್ತೇವೆ ಎಂದು ಬರೆದಿಲ್ಲ ಅಂದರೆ ಸರಿಯಲ್ಲ. ಆ ತರಹ ದಾಖಲೆಗಳನ್ನು ತಂದು ನ್ಯಾಯಾಲಯದಲ್ಲಿ ಹಾಜರಪಡಿಸಲು ತೊಂದರೆ ಇಲ್ಲ. ನಮ್ಮ ಕುಟುಂಬದಲ್ಲಿ ಯಾವುದೇ ಕರಾರು ಪತ್ರ 30 ಸಾವಿರ ರೂ. ಗಳಿಗೆ ಆಗಿಲ್ಲ. ಆದರೆ ಹಿರಿಯರ ಮುಂದೆ ಆಗಿತ್ತು. ಆ ತರಹ ಹಿರಿಯರ ಮುಂದೆ ಮಾತುಕತೆಯಾಗಿಲ್ಲ ಅಂದರೆ ಸರಿಯಲ್ಲ. ಮತ್ತು ಅದರ ಬಗ್ಗೆ ವಾದ ಪತ್ರ ಹಾಗೂ ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿಲ್ಲ ಅಂದರೆ ಸರಿ. ಯಾವುದೇ ಮಾತುಕತೆಯಾಗಿಲ್ಲ, ನ್ಯಾಯಾಲಯದಲ್ಲಿ ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ವಾದ ಪತ್ರ ಹಾಗೂ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಸಂಗತಿ ಹೇಳಿರುತ್ತೇನೆ ಅಂದರೆ ಸರಿಯಲ್ಲ.

**OS**: 526-23 **PW**-1

ನಾನು ಸುಳ್ಳು ದಾವಾ ಕಾರಣ ಹೇಳಿ, ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ಅವಶ್ಯಕ ಪಕ್ಷಗಾರರನ್ನು ದಾವೆಯಲ್ಲಿ ಸೇರಿಸಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ

**OS**: 328-18 **PW**-2

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 20.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ N S E, ವಕೀಲರಿಂದ ಃ**

3. ನಾನು ನನ್ನ ಮುಖ್ಯ ವಿಚಾರಣೆಯ ಪ್ಯಾರಾ ನಂಃ 7 ರ ಬಗ್ಗೆ ದಾವೆಯಲ್ಲಿ ಬರೆದಿಲ್ಲ ಅಂದರೆ ಸರಿಯಲ್ಲ. ಬರೆದಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಮತ್ತು ನನ್ನ ತಾಯಿ ಮಾಹಿತಿ ಹಕ್ಕಿನಡಿಯಲ್ಲಿ ಅರ್ಜಿ ಸಲ್ಲಿಸಿಲ್ಲ. ನಾನು ಹಾಗೂ ನನ್ನ ತಾಯಿ ಮಾಹಿತಿ ಹಕ್ಕಿನಡಿಯಲ್ಲಿ ಅರ್ಜಿ ಹಾಕಿದ್ದೇವೆ ಎಂದು ಹೇಳಿ ಬರೆಸಿಲ್ಲ. ನಾನು ಮಾಹಿತಿ ಹಕ್ಕಿನಡಿ ಯಲ್ಲಿ ಅರ್ಜಿ ಸಲ್ಲಿಸದ ಕಾರಣ ಯಾರ ಯಾರ ಹೆಸರು ಯಾವ ದಾಖಲೆಗಳಲ್ಲಿ ನಮೂದು ಆಗಿದೆ ಎಂದು ಗೊತ್ತಿಲ್ಲ ಅಂದರೆ ಸರಿ. 13 ವರ್ಷಗಳ ಹಿಂದೆ ಪ್ರತಿವಾದಿಗಳ ಮಾಲ್ಕಿ ಹಕ್ಕಿನ ಬಗ್ಗೆ ಗೊತ್ತಾಗಿದೆ. 13 ವರ್ಷಗಳ ಹಿಂದೆ ಪ್ರತಿವಾದಿಗಳ ಮಾಲ್ಕಿ ಹಕ್ಕಿನ ಬಗ್ಗೆ ಗೊತ್ತಾದ ನಂತರ ನಾವೇನು ಕ್ರಮ ತೆಗೆದುಕೊಂಡಿಲ್ಲ ಮತ್ತು ನ್ಯಾಯಾಲಯದಲ್ಲಿ ದಾವೆ ಹಾಕಿಲ್ಲ. ನಮಗೆ ಪ್ರತಿವಾದಿಗಳ ಮಾಲ್ಕಿ ಹಕ್ಕಿನ ಬಗ್ಗೆ ಗೊತ್ತಾದ ನಂತರ 3 ವರ್ಷಗಳ ಒಳಗಡೆ ದಾವೆ ಹಾಕಿಲ್ಲ, ಅಂದರೆ ನಾನು ಗಂಡನ ಮನೆಯಲ್ಲಿದ್ದೆ, ನನ್ನ ತಾಯಿ ಹಾಗೂ ತಮ್ಮನಿಗೆ ಗೊತ್ತು. ಪ್ರಕರಣದ ವಿಷಯ ಗೊತ್ತಿದೆ. ಅಸಲು ದಾವೆ ನಂಃ 331//11 ರಲ್ಲಿ ನನ್ನ ತಮ್ಮ ಏನು ಪರಿಹಾರ ಕೇಳಿದ್ದನೆಂದು ಗೊತ್ತಿಲ್ಲ. ದೇವಿರಮ್ಮನ ಖುಲ್ಲಾ ಜಾಗೆ ಇದ್ದ ಬಗ್ಗೆ ಮಾಲ್ಕಿ ಹಕ್ಕಿನ ದಾಖಲೆಗಳನ್ನು ಹಾಜರಪಡಿಸಿಲ್ಲ ಅಂದರೆ ನಮ್ಮ ತಮ್ಮನ ಬಳಿ ಇವೆ. ನಮ್ಮ ತಮ್ಮ ಏನೂ ಮಾಡಿರುತ್ತಾನೆಂದು ಗೊತ್ತಿಲ್ಲ. ಮಾಲ್ಕಿ ಹಕ್ಕಿನ ದಾಖಲೆಗಳು ನಮ್ಮ ಬಳಿ ಇಲ್ಲವೆಂದರೆ ಸರಿಯಲ್ಲ. ಉತಾರೆ ಹಾಗೂ ಮುಟೇಶನ್ ಇವೆ. ನಮ್ಮ ಅಜ್ಜಿ ಹೆಸರಿನಲ್ಲಿರುವ ಉತಾರೆ ಹಾಗೂ ಮುಟೇಶನಗಳನ್ನು ಹಾಜರಪಡಿಸಿಲ್ಲ ಅಂದರೆ ನಮ್ಮ ತಮ್ಮನ ಬಳಿ ಇವೆ. ನಮ್ಮ ತಮ್ಮ ಸದರಿ ದಾಖಲೆಗಳನ್ನು ತೆಗೆದುಕೊಂಡು ಏನು ಮಾಡಿದ್ದಾನೆ ಎಂದು ಗೊತ್ತಿಲ್ಲ, ಆದರೆ ಅವನ ಬಳಿ ಇವೆ. ನಮ್ಮ ತಂದೆ ಮರಣ ಹೊಂದಿದಾಗ ನನ್ನ ವಯಸ್ಸು 10 ವರ್ಷ ಇರಬಹುದು. ದೇವಿರಮ್ಮ ಮರಣ ಹೊಂದಿದಾಗ ನನ್ನ ಮದುವೆಯಾಗಿತ್ತು. ನನ್ನ ಹಾಗೂ ರೇಣುಕಾ ರವರ ಮದುವೆಯಾಗಿತ್ತು. ಮದುವೆಯಾದ ನಂತರ ನಾವು ನಮ್ಮ ಗಂಡನ ಮನೆಯಲ್ಲಿದ್ದೆವು. ದೇವಿರಮ್ಮನ ಯಾವ ದಾಖಲೆ ಆಧಾರದ ಮೇಲೆ ಯಾವ ವರ್ಷ ಮಾಲಿಕಳಾದಳು ಎಂದು ನನಗೆ ಗೊತ್ತಿಲ್ಲ. ಸದರಿ ವಿಷಯವನ್ನು ದಾವೆಯಲ್ಲಿ ಬರೆದಿಲ್ಲವೆಂದರೆ ಗೊತ್ತಿಲ್ಲ.

**OS**: 328-18 **PW**-2

ನನ್ನ ಹಾಗೂ ಇತರೆ ವಾದಿಗಳ ಜನ್ಮ ದಿನಾಂಕ ತೋರಿಸಲು ದಾಖಲೆ ಹಾಜರಪಡಿಸಿಲ್ಲ ಅಂದರೆ ಗೊತ್ತಿಲ್ಲ. ಎರಡು ಗುಡಿಸಲುಗಳನ್ನು ಕಟ್ಟಿಸಿದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯದಲ್ಲಿ ಹಾಜರಪಡಿಸಿಲ್ಲ ಅಂದರೆ ಗೊತ್ತಿಲ್ಲ, ಆದರೆ ನಮ್ಮ ತಮ್ಮನಿಗೆ ಗೊತ್ತು. ನಾನು ಗಂಡನ ಮನೆಯಲ್ಲಿದ್ದೆನು. ಎರಡು ಮನೆಗಳನ್ನು ಕಟ್ಟಿಸಿದ ಬಗ್ಗೆ ದಾಖಲೆಗಳನ್ನು ಹಾಜರಪಡಿಸಿಲ್ಲ. ಅದನ್ನು ಯಾರು ಕಟ್ಟಿಸಿರುತ್ತಾರೆಂದು ನನ್ನ ತಾಯಿಗೆ ಗೊತ್ತು. ಪುನಃ ಹೇಳುತ್ತಾರೆ ತಾಯಿ ಕಟ್ಟಿಸಿರುತ್ತಾರೆಂದು. ಸದರಿ ದಾಖಲೆಗಳ ಬಗ್ಗೆ ನನ್ನ ತಮ್ಮನಿಗೆ ಗೊತ್ತು. 2004 ರಿಂದ ವಾಸವಿದ್ದ ಬಗ್ಗೆ ದಾಖಲೆ ನಮ್ಮ ತಮ್ಮನಿಗೆ ಗೊತ್ತು. ನಾವು 2004 ರಿಂದ ನಾವು ಮನೆ ಕಟ್ಟಿಸಿದ ಬಗ್ಗೆ ಮತ್ತು ವಾಸವಿದ್ದ ಬಗ್ಗೆ ದಾಖಲೆ ಇವೆ, ಆದರೆ ಹಾಜರಪಡಿಸಿಲ್ಲ. 2006 ಹಾಗೂ 2008 ರಲ್ಲಿ ಪ್ರತಿವಾದಿ -1 ಹಾಗೂ 4 ರವರು ವಿಧ್ಯುತ್ ಮೀಟರ ಪಡೆದಿರುತ್ತಾರೆ ಅಂದರೆ ಸರಿಯಲ್ಲ. ನಮ್ಮ ಅಜ್ಜನ ಹೆಸರಿನಲ್ಲಿದೆ. ನಳದ ಸಂಪರ್ಕ ಪ್ರತಿವಾದಿ 1 ಹಾಗೂ 4 ರವರಹೆಸರಿನಲ್ಲಿ 2011 ಕ್ಕಿಂತ ಮುಂಚೆ ಇತ್ತು ಅಂದರೆ ಸರಿಯಲ್ಲ. ನಮ್ಮ ಚಿಗವ್ವ ಮಾರ್ಕೇಂಡೆವ್ವ ರವರ ಹೆಸರಿನಲ್ಲಿದೆ. ಸದರಿ ದಾಖಲೆ ಹಾಜರಪಡಿಸಿಲ್ಲ. ಅವು ನಮ್ಮ ಮನೆಯಲ್ಲಿವೆ. ವಾದಿ ನಂಃ 1 ಹಾಗೂ 2 ರವರು ಕಳೆದ 16 ವರ್ಷಗಳಿಂದ ಆನಂದನಗರದಲ್ಲಿ ವಾಸವಾಗಿದ್ದಾರೆ. ಆನಂದನಗರದಲ್ಲಿ 16 ವರ್ಷಗಳಿಂದ ನಳ, ವಿದ್ಯುತ್ ಹಾಗೂ ಗ್ಯಾಸ ಸಂಪರ್ಕ ಇರುವ ಬಗ್ಗೆ ದಾಖಲೆಗಳಿವೆ. ಮತ್ತು ಪಡಿತರ ಚೀಟಿ ಹಾಗೂ ಚುನಾವಣಾ ಗುರುತಿನ ಚೀಟಿ ಇವೆ. ನನ್ನ ತಮ್ಮ ನ್ಯಾಯಾಲಯದಲ್ಲಿ ಯಾವ ದಾಖಲೆಗಳನ್ನು ಹಾಜರಪಡಿಸಿರುತ್ತಾನೆ ಗೊತ್ತಿಲ್ಲ, ಆ ದಾಖಲೆಗಳ ಬಗ್ಗೆ ಹೇಳಲು ಆಗುವುದಿಲ್ಲ. ಅಸಲು ದಾವೆ ನಂಃ 331/11 ದಾಖಲಾದ ನಂತರ ನನ್ನ ತಮ್ಮ ಖಾಸಗಿ ದೂರನ್ನು ಸೃಷ್ಟಿ ಮಾಡಿ ಹಾಕಿದ್ದು ಗೊತ್ತಿಲ್ಲ. ಪ್ರತಿವಾದಿಗಳು ಬೇಕಾಯ್ದೆ ಶೀರ ಆಗಿ 2011 ಜುಲೈ- ದಲ್ಲಿ ಮನೆ ಬಾಗಿಲು ಒಡೆದು ಒಳಗಡೆ ಹೋಗಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದೇವಿರಮ್ಮನ ಖರೀದಿ ಪತ್ರವನ್ನು ಸೃಷ್ಟಿ ಮಾಡಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿಗಳು ವಾಸವಿರುವ ಸ್ಥಳ ಗಂಗಾಧರನಗರದ ಬಗ್ಗೆ ನಮ್ಮ ತಮ್ಮ ಹೇಳಿ ಬರೆಸಿರುತ್ತಾನೆ. ವಾದ ಪತ್ರದಲ್ಲಿರುವ ಪ್ರತಿವಾದಿಗಳ ವಿಳಾಸ ಸರಿಯಾಗಿರುವ ಬಗ್ಗೆ ಗೊತ್ತಿಲ್ಲ. ನಾವು ಮಾಹಿತಿ ಕೊಟ್ಟು ಬರೆಸಿಲ್ಲ. ಪ್ರತಿವಾದಿಗಳ ಆಸ್ತಿ ಕಬಳಿಸಲು ಸುಳ್ಳು ದಾವೆ ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲ.

**OS**: 328-18 **PW**-2

ದೇವಿರಮ್ಮಳಿಗೆ ದಾವಾ ಆಸ್ತಿ ಬಗ್ಗೆ ಯಾವುದೇ ಮಾಲ್ಕಿ ಹಕ್ಕು ಇರಲಿಲ್ಲ ಅಂದರೆ ಸರಿಯಲ್ಲ. ಮಾಲ್ಕಿ ಹಕ್ಕು ದಾಖಲೆಗಳು ಇಲ್ಲ ಅಂದರೆ ಸರಿಯಲ್ಲ. ಪರಿಹಾರಕ್ಕೆ ಅರ್ಹರರು ಇಲ್ಲದಿದ್ದರೂ ಸಹ ಸುಳ್ಳು ದಾಖಲೆಗಳನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ.